# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 220 | Pages. 2 | Date: 11-08-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 220 – ಪುಟಗಳು : 2 | 11-08-2026 ಮಂಗಳವಾರ | Ph: 8762954248 | ದರ : ₹1


# ಎಸ್.ಐ.ಆರ್ ಶೇ.100ರಷ್ಟು ಡಿಜಿಟಲೀಕರಣ ಪೂರ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಮತದಾರರ ಗಣತಿ ಅರ್ಜಿಗಳ ಶೇ.100ರಷ್ಟು ಡಿಜಿಟಲೀಕರಣ ಪೂರ್ಣಗೊಂಡಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಭಾನುವಾರ ತಿಳಿಸಿದೆ.

ರಾಜ್ಯದಲ್ಲಿ ಒಟ್ಟು 5,54,32,314 ಮತದಾರರು ಇದ್ದಾರೆ. ಈ ಪೈಕಿ 1,09,13,776 (ಶೇ.19.69) ಮತದಾರರನ್ನು ಗೈರು, ಸ್ಥಳಾಂತರಗೊಂಡವರು, ಮೃತಪಟ್ಟವರು, ನಕಲಿ ಹಾಗೂ ಇತರರು ವಿಭಾಗದಲ್ಲಿ ಗುರುತಿಸಲಾಗಿದೆ. ಉಳಿದ 4,45,18,538 ಮತದಾರರು ತಮ್ಮ ಗಣತಿ ಅರ್ಜಿಗಳಿಗೆ ಸಹಿ ಮಾಡಿ, ಅವುಗಳನ್ನು ಬೂತ್ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿದ್ದಾರೆ.



ಒಟ್ಟು ೦ಆಆಔ ಮತದಾರರ ಪೈಕಿ 15,65,838 (ಶೇ.2.82) ಮಂದಿ ಪತ್ತೆಯಾಗದವರು ಅಥವಾ ಗೈರುಹಾಜರಿರುವವರು, 65,85,791 (ಶೇ.11.88) ಮಂದಿ ಶಾಶ್ವತವಾಗಿ ಸ್ಥಳಾಂತರಗೊಂಡವರು, 16,35,759 (ಶೇ.2.95) ಮಂದಿ ಮೃತಪಟ್ಟವರು, 6,92,272 (ಶೇ.1.26) ಮಂದಿ ನಕಲಿ ಅಥವಾ ಈಗಾಗಲೇ ನೋಂದಾಯಿತರು ಹಾಗೂ 4,27,119 (ಶೇ.0.77) ಮಂದಿ ಇತರರು ಅಥವಾ ಅರ್ಜಿಗೆ ಸಹಿ ಮಾಡಲು ಇಚ್ಛಿಸದವರು ಎಂದು ಗುರುತಿಸಲಾಗಿದೆ.

ಅಂಕಿ-ಅಂಶಗಳ ಪ್ರಕಾರ 33,61,876 (ಶೇ.6.06) ಮತದಾರರು ಯಾವುದೇ ಮ್ಯಾಪಿಂಗ್ ಇಲ್ಲದ ವಿಭಾಗದಲ್ಲಿದ್ದಾರೆ. 1,76,68,045 (ಶೇ.31.87) ಮತದಾರರು ಸ್ವಯಂ ಮ್ಯಾಪಿಂಗ್ ವಿಭಾಗದಲ್ಲಿದ್ದರೆ, 2,34,54,791 (ಶೇ.42.31) ಮತದಾರರು ಪ್ರೊಜೆನಿ ಮ್ಯಾಪಿಂಗ್ ವಿಭಾಗದಲ್ಲಿದ್ದಾರೆ.

ಒಟ್ಟು 7,05,062 ಮತದಾರರು ತಮ್ಮ ಗಣತಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಈ ಪೈಕಿ 9,000 ಅರ್ಜಿಗಳ ಪರಿಶೀಲನೆ ಬೂತ್ ಮಟ್ಟದ ಅಧಿಕಾರಿಗಳಿಂದ ಇನ್ನೂ ಬಾಕಿಯಿದೆ. ಇನ್ನು 3,95,781 ಮತದಾರರು ಫಾರಂ-6 ಭರ್ತಿ ಮಾಡಿ ಚುನಾವಣಾಧಿಕಾರಿಗಳಿಗೆ ಸಲ್ಲಿಸಿದ್ದಾರೆ. 8,37,514 ಮತದಾರರು ಫಾರಂ-8 ಭರ್ತಿ ಮಾಡಿ ತಿದ್ದುಪಡಿಗೆ ಅರ್ಜಿ ಸಲ್ಲಿಸಿದ್ದಾರೆ.

ತಮ್ಮ ಗಣತಿ ಅರ್ಜಿಗಳಿಗೆ ಸಹಿ ಮಾಡಿ ಅವುಗಳನ್ನು ಬೂತ್ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸದವರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ ಎಂದು ಕರ್ನಾಟಕ ಸಿಇಒ ಕಚೇರಿ ತಿಳಿಸಿದೆ.

ಇದರಲ್ಲಿ ಗೈರುಹಾಜರಿ ಅಥವಾ ಪತ್ತೆಯಾಗದ ಮತದಾರರು ಹಾಗೂ ಶಾಶ್ವತವಾಗಿ ಸ್ಥಳಾಂತರಗೊಂಡವರೂ ಸೇರಿದ್ದಾರೆ.

ತಮ್ಮ ಹಿಂದಿನ ಎಸ್ಐಆರ್ ಮಾಹಿತಿಯನ್ನು ಹಂಚಿಕೊಳ್ಳಲು ಸಾಧ್ಯವಾಗದೆ ಆನೋ ಮ್ಯಾಪಿಂಗ್‌ಟಿ ವಿಭಾಗದಲ್ಲಿ ದಾಖಲಾಗಿರುವ ಮತದಾರರಿಗೆ ಮುಂದಿನ ಹಂತದಲ್ಲಿ ನೋಟಿಸ್ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವ ೦ಆಆಔ ಪಟ್ಟಿಯಲ್ಲಿರುವ ವಿವರಗಳನ್ನು ಪರಿಶೀಲಿಸಲು ಮತದಾರರಿಗೆ ಆಗಸ್ಟ್ 17ರವರೆಗೆ ಅವಕಾಶ ನೀಡಲಾಗಿದೆ. ತಮ್ಮ ಹೆಸರು ಅಥವಾ ಸಂಬಂಧಿಸಿದ ಮತದಾರರ ವಿವರಗಳು ತಪ್ಪಾಗಿ ೦ಆಆಔ ಪಟ್ಟಿಯಲ್ಲಿ ಸೇರಿದ್ದರೆ, ನಿಗದಿತ ಅವಧಿಯೊಳಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

## ಬೇಲೂರಿನಲ್ಲಿ ತೋಟಗಾರಿಕೆ ಪಿತಾಮಹ ಮರಿಗೌಡರ ಜನ್ಮ ದಿನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ತೋಟಗಾರಿಕೆ ಇಲಾಖೆ ಆವರಣದಲ್ಲಿ ತೋಟಗಾರಿಕೆ ಕ್ಷೇತ್ರದ ಪಿತಾಮಹ ಡಾ.ಮರಿಗೌಡ ಅವರ ಜನ್ಮದಿನದ ಅಂಗವಾಗಿ ಇಲಾಖೆ ಅಧಿಕಾರಿಗಳು ಸಸಿ ನೆಟ್ಟು ಹಾಗು ಹಣ್ಣಿನ ಗಿಡಗಳನ್ನು ವಿತರಿಸುವ ಮೂಲಕ ದಿನಾಚರಣೆ ಆಚರಿಸಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಸ್.ಮಧುಕುಮಾರ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ನಾವು ನೆಡುವ ಒಂದೊಂದು ಗಿಡವು ನಮ್ಮ ಮುಂದಿನ ಪೀಳಿಗೆಗೆ ಸಂದೇಶ ನೀಡುವಂತಿರಬೇಕು. ಅಲ್ಲದೆ ತೋಟಗಾರಿಕೆ ಕ್ಷೇತ್ರದ ಪಿತಾಮಹ ಡಾ.ಮರಿಗೌಡರ ಜನ್ಮ ದಿನದ ಹಿನ್ನಲೆಯಲ್ಲಿ ರೈತರಿಗೆ ಹಣ್ಣಿನ ಗಿಡಗಳನ್ನು ವಿತರಿಸಿ ಮತ್ತು ಕಚೇರಿ ಆವರಣದಲ್ಲಿ ಗಿಡಗಳನ್ನು ನೆಡುತ್ತಿದ್ದೇವೆ. ಈ ಮೂಲಕ ಪರಿಸರಕ್ಕೆ ಕೊಡುಗೆ ನೀಡುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಜೊತೆಗೆ ಎಲ್ಲರೂ ಎಲ್ಲೆಲ್ಲಿ ಸ್ಥಳಾವಕಾಶ ಸಿಗುತ್ತದೆಯೋ ಅಲ್ಲಿ ಸಾಧ್ಯವಾದಷ್ಟು ಗಿಡಗಳನ್ನು ನೆಡುವುದರ ಜೊತೆಗೆ ಮರ, ಕಾಡು ರಕ್ಷಣೆಗೆ ಆದ್ಯತೆ ನೀಡಬೇಕೆಂದರು.

ಬೇಲೂರು-ಹಳೇಬೀಡು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಡಗೂರು ಬಸವರಾಜು, ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ಅಧಿಕಾರಿ ಎಂ.ಆರ್.ಲೋಹಿತ್, ಕ್ಷೇತ್ರಾಧಿಕಾರಿ ಜಗದೀಶ್, ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಚಂದ್ರಶೇಖರ್ ಪಡವಳಲು ಹಾಗು ಇತರರಿದ್ದರು.




ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಮಾದಿಗ ಸಮುದಾಯ ಭವನಕ್ಕೆ 25 ಲಕ್ಷ ರೂ. ನೆರವು

## ಸಂಸದ ಶ್ರೇಯಸ್ ಪಟೇಲ್ ಘೋಷಣೆ | ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾದಿಗ ಸಮುದಾಯದ ಬಹುದಿನಗಳ ಕನಸಾದ ಸಮುದಾಯ ಭವನ ನಿರ್ಮಾಣಕ್ಕೆ ಜಿಲ್ಲಾಡಳಿತ 10 ಗುಂಟೆ ಜಮೀನು ನೀಡಿದ್ದು, ಕಟ್ಟಡ ನಿರ್ಮಾಣಕ್ಕೆ ಹಂತ ಹಂತವಾಗಿ 25 ಲಕ್ಷ ರೂ. ನೀಡುತ್ತೇನೆಂದು ಸಂಸದ ಶ್ರೇಯಸ್ ಪಟೇಲ್ ಅವರು ಘೋಷಿಸಿದರು.

ಜಿಲ್ಲಾ ಬಾಬು ಜಗಜೀವನರಾಮ್ ಕ್ಷೇಮಾಭಿವೃದ್ಧಿ ಸಂಘದಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ತರಬೇತಿ ಕೇಂದ್ರ ಸ್ಥಾಪನೆಗೆ ಮುಂದಾಗಿರುವುದು ಸಂತಸದ ವಿಚಾರ. ಸಮುದಾಯದ ನಾಯಕ ಕೆ.ಹೆಚ್.ಮುನಿಯಪ್ಪ ಅವರು ಸಮಾಜದ ಏಳಿಗೆಗೆ ಶ್ರಮಿಸುವಂತೆ ನನಗೆ ಸೂಚಿಸಿದ್ದಾರೆ. ನಾನು ಯಾವಾಗಲೂ ನಿಮ್ಮ ಪರವಾಗಿರುತ್ತೇನೆಂದರು.

ದೇಶದ ಮೊದಲ ಉಪಪ್ರಧಾನಿ ಬಾಬು ಜಗಜೀವನ್ ರಾಮ್ ಹಾಗು ಡಾ. ಬಿ.ಆರ್.ಅಂಬೇಡ್ಕರ್ ಸಮಾಜದ ಎರಡು ಕಣ್ಣು. ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಅವರು ಶ್ರಮಿಸಿದ್ದಾರೆ.

ನಾನು ಸಂಸದನಾಗಿ ಈ ಮಟ್ಟಕ್ಕೆ ಬೆಳೆಯಲು ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ. ಯುವ ಪೀಳಿಗೆ ಸಂವಿಧಾನ ತಿಳಿಯಬೇಕು. ಪವಿತ್ರ ಗ್ರಂಥದ ಬಗ್ಗೆ ಅರಿವು ಹೊಂದಬೇಕು. ನಾವು ಏನೇ ಸಾಧನೆ ಮಾಡಬೇಕೆಂದರೂ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕೆಂದರು.



### ಮೀಸಲಾತಿ ಇರಬೇಕು

ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಮಾತನಾಡಿ, ಯಾರೂ ಕೂಡ ಇಂತಹುದೇ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಸಲ್ಲಿಸಿರುವುದಿಲ್ಲ. ಆಚರಣೆ, ಪದ್ಧತಿಗಳು ನಾವು ಬೆಳೆಯುತ್ತಾ ಗೊತ್ತಾಗುತ್ತದೆ. ಸಾವಿರಾರು ವರ್ಷಗಳಿಂದ ದಲಿತ ಸಮುದಾಯ ಶೋಷಣೆ ಅನುಭವಿಸಿಕೊಂಡು ಬಂದಿದೆ. ಅವರು ಸ್ವಾಭಿಮಾನದ ಬದುಕಿಗಾಗಿ ಮೀಸಲಾತಿ ಕೇಳುವುದರಲ್ಲಿ ಯಾವ ತಪ್ಪಿಲ್ಲ. ದೇಶ ಸ್ವಾತಂತ್ರ್ಯ ಸಾಧಿಸಿ 80 ವರ್ಷ ಕಳೆದರೂ ಸಮಾನತೆ ಇನ್ನೂ ಸಾಧ್ಯವಾಗಿಲ್ಲ. ನೂರಾರು ವರ್ಷಗಳ ತಪ್ಪನ್ನು ಕೇವಲ ಎಂಟು ದಶಕಗಳಲ್ಲಿ ಸರಿಪಡಿಸಲು ಸಾಧ್ಯವಿಲ್ಲ. ಹಾಗಾಗಿ ಮೀಸಲಾತಿ ಸಮರ್ಪಕವಾಗಿ ಜಾರಿಯಾಗಬೇಕೆಂದು ಆಗ್ರಹಿಸಿದರು.

ಮಾದಿಗ ಸಮುದಾಯ ಇನ್ನು ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದೆ. ಆರ್ಥಿಕವಾಗಿ ಸದೃಢರಾದರೆ ಮಾತ್ರ ಸಮಾಜವನ್ನು ಮೇಲಕ್ಕೆತ್ತಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಕೇವಲ ವಿದ್ಯೆ ಕಲಿತ ಮಾತ್ರಕ್ಕೆ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಆರ್ಥಿಕವಾಗಿ ಸದೃಢರಾಗುವತ್ತ ಗಮನ ಹರಿಸಬೇಕು. ಸಮಾಜದ ವ್ಯಕ್ತಿ ಒಳ್ಳೆಯ ಉದ್ಯೋಗ ಪಡೆದು ತನ್ನ ಸಂಬಳದಲ್ಲಿ ಸಮುದಾಯದ ಮತ್ತೊಬ್ಬ ವಿದ್ಯಾರ್ಥಿಗೆ ನೆರವಾಗಬೇಕು. ಗ್ರಾಮದ ಪ್ರತಿಯೊಬ್ಬರು ಈ ಸಂಕಲ್ಪ ಮಾಡಿದರೆ ಕೆಲವೇ ವರ್ಷಗಳಲ್ಲಿ ಮಾದಿಗ ಸಮುದಾಯ ಸರ್ವ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಲು ಸಾಧ್ಯವೆಂದರು.

ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು. ಶಿಕ್ಷಣ ಕೇವಲ ಅಂಕಪಟ್ಟಿಗೆ ಸೀಮಿತವಾಗದೆ ಕೆಲಸ ಕಟ್ಟಿಕೊಳ್ಳಲು ನೆರವಾಗಬೇಕು. ಸರ್ಕಾರದಿಂದಲೇ ನಮ್ಮ ಜೀವನ ಸುಧಾರಿಸಬೇಕೆಂದು ಬಯಸುವುದು ತಪ್ಪು. ರಾಜ್ಯದಲ್ಲಿ ಕಾಂಗ್ರೆಸ್, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ. ಎರಡೂ ಸರ್ಕಾರಗಳಿಂದಲೂ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ. 140 ಕೋಟಿ ಜನಸಂಖ್ಯೆಯ ದೇಶ ನಮ್ಮದಾಗಿರುವುದರಿಂದ ವ್ಯಕ್ತಿಗತವಾಗಿ ಸಹಾಯ ಮಾಡುವುದು ಅಸಾಧ್ಯ. ಯಾವ ಸರ್ಕಾರವು ಜೀವನ ಕಟ್ಟಿಕೊಳ್ಳಲು ಹಣ ಕೊಡುವುದಿಲ್ಲ. ನಮ್ಮ ಏಳಿಗೆಗೆ ನಾವೇ ಶಿಲ್ಪಿಗಳಾಗಬೇಕೆಂದು ಸಲಹೆ ನೀಡಿದರು.

ಒಳಮಿಸಲಾತಿ ಹೋರಾಟಗಾರ ಭಾಸ್ಕರ್ ಪ್ರಸಾದ್ ಅವರು ಮಾತನಾಡಿ, ಕಡಿಮೆ ಅಂಕ ಗಳಿಸಿದ ಮಾತ್ರಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳ ಮನಸ್ಥಿತಿಯನ್ನು ಬದಲಿಸುವ ಕೆಲಸ ಮೊದಲು ಆಗಬೇಕು. ಜೀವನಕ್ಕೆ ಅಂಕಗಳು ಮಾನದಂಡ ಆಗಬಾರದು ಎಂದರು.

### ಮೀಸಲಾತಿ ನಮ್ಮ ಹಕ್ಕು

ಮೀಸಲಾತಿ ಪಡೆಯುವುದು ನಮ್ಮ ಹಕ್ಕು ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕು. ಮೀಸಲಾತಿ ವಿರೋಧಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿದವರಿಗೆ ವಾಸ್ತವಾಂಶ ಗೊತ್ತಿಲ್ಲ.

1902ರಲ್ಲಿ ಶಾಹೂ ಮಹಾರಾಜರು ಮೀಸಲಾತಿ ಜಾರಿಗೊಳಿಸಿದರು. ದೇಶದಲ್ಲಿ ಬ್ರಾಹ್ಮಣರಲ್ಲದ ಇತರ 3600 ಹಿಂದುಳಿದ ಹಾಗು 1600 ಪರಿಶಿಷ್ಟ ಜಾತಿಗಳಿವೆ. ಇವರಿಗೆ ಶೇ. 50 ರಷ್ಟು ಮೀಸಲಾತಿಯನ್ನು ಶಾಹೂ ಮಹಾರಾಜರು ಘೋಷಿಸಿದರು. ಅದರನ್ವಯ ಮೀಸಲಾತಿಯನ್ನು ಮೊದಲು ಅನುಭವಿಸಿದವರು ಹಿಂದುಳಿದ ವರ್ಗದವರು ಹೊರತು ಹೊಲೆ ಮಾದಿಗರಲ್ಲ ಎಂಬ ಸತ್ಯ ಭವಿಷ್ಯದ ಪೀಳಿಗೆಗೆ ಗೊತ್ತಾಗಬೇಕೆಂದರು.

ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೀಸಲಾತಿಯನ್ನು ಪ್ರಥಮ ಬಾರಿಗೆ ಜಾರಿಗೆ ತಂದರು. ಅದರ ಮೊದಲ ಫಲಾನುಭವಿ ಸರ್. ಎಂ. ವಿಶ್ವೇಶ್ವರಯ್ಯ. ಮೈಸೂರಿನಲ್ಲಿ 1905ರ ಹೊತ್ತಿಗೆ ಮೈಸೂರಿನಲ್ಲಿ ಮೀಸಲಾತಿ ವಿಚಾರವಾಗಿ ಚಳವಳಿ ಆರಂಭವಾಯಿತು. ಆಯಕಟ್ಟಿನ ಸ್ಥಾನಗಳಲ್ಲಿ ತಮಿಳು ಬ್ರಾಹ್ಮಣರು ಪ್ರಾಬಲ್ಯ ಮೆರೆಯುತ್ತಿದ್ದಾರೆಂದು ಕರ್ನಾಟಕದ ಬ್ರಾಹ್ಮಣರು ಹೋರಾಟ ಮಾಡಿದರು. ಅದರ ಫಲವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೀಸಲಾತಿಯಲ್ಲಿ ಆಮೂಲಾಗ್ರ ಬದಲಾವಣೆ ತಂದಿದ್ದಾರೆಂದು ವಿವರಿಸಿದರು.

ರಾಜ್ಯದಲ್ಲಿ ಒಳಮೀಸಲಾತಿ ಕುರಿತು ಸಾಕಷ್ಟು ಹೋರಾಟಗಳು ನಡೆಯುತ್ತಿವೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿಗೊಳಿಸಿದ್ದಾಗಿ ಹೇಳಿದರು. ಆದರೆ ಹೈಕೋರ್ಟ್ ಅದಕ್ಕೆ ತಡೆ ನೀಡಿದೆ. ಹೀಗಾಗಿ ಸರ್ಕಾರಿ ಹುದ್ದೆಗಳ ಭರ್ತಿಗೆ ಅಡ್ಡಿಯುಂಟಾಗಿದೆ. ಈ ವಿಚಾರದಲ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಕೆಲಸ ರಾಜ್ಯ ಸರ್ಕಾರದಿಂದ ಆಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳು ಹಾಗು ಸಮುದಾಯದ ನಿವೃತ್ತ ನೌಕರರಿಗೆ ಸನ್ಮಾನಿಸಲಾಯಿತು. ಜಿಲ್ಲಾ ಬಾಬು ಜಗಜೀವನರಾಮ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸವರಾಜು, ವತ್ಸಲಾ ಕುಮಾರಸ್ವಾಮಿ, ಉದ್ಯಮಿ ಕಂಚಮಾರನಹಳ್ಳಿ ಲಕ್ಷ್ಮಿಕಾಂತ್, ವಕೀಲ ಅರುಣ್ ಕುಮಾರ್, ಭಾಸ್ಕರ ಪ್ರಸಾದ್, ಸಹಾಯಕ ಕೃಷಿ ನಿರ್ದೇಶಕ ತೀರ್ಥ ಪ್ರಸಾದ್, ಯಶೋಧರ್, ಶಿವಣ್ಣ, ಕೆ.ಪಿ.ಸುರೇಶ್, ಸೋಮಶೇಖರ್, ಜಿ.ಎಸ್. ಚಂದ್ರಾವತಿ, ರಂಗರಾಜು, ವಕೀಲ ಮಾಳಪ್ಪ ಮತ್ತಿತರರಿದ್ದರು.

# ಪ್ರೇಮದ ಅತ್ಯುನ್ನತ ಮತ್ತು ಉತ್ಕಂಠಿತ ಭಾವವೇ ಭಕ್ತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನಗರದ ವಿವೇಕಾನಂದ ಯೋಗ ಶಿಕ್ಷಾ ಶಾಲೆಯಲ್ಲಿ ಆಕುಂಡಲಿನಿ ಯೋಗ ಹಾಗೂ ಭಕ್ತಿ ಯೋಗದ ಅನುಸಂಧಾನ ಪ್ರಾತ್ಯಕ್ಷಿಕೆಟಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಲೇಖಕ ಗೊರೂರು ಶಿವೇಶ್, ಪ್ರೇಮದ ಅತ್ಯುನ್ನತ ಮತ್ತು ಉತ್ಕಂಠಿತ ಭಾವವೇ ಭಕ್ತಿಯಾಗಿದೆ. ಮಾನವನ ಅಂತರಂಗವನ್ನು ಶುದ್ಧೀಕರಿಸುವ ಶಕ್ತಿಯು ಭಕ್ತಿ ಮತ್ತು ಯೋಗ ಮಾರ್ಗಗಳಿಗಿದೆ, ಎಂದು ಅಭಿಪ್ರಾಯಪಟ್ಟರು.

ಕುಂಡಲಿನಿ ಯೋಗ ಹಾಗೂ ಭಕ್ತಿ ಯೋಗದ ನಿಕಟ ಬಾಂಧವ್ಯವನ್ನು ವಿವರಿಸಿದ ಅವರು, ಕುಂಡಲಿನಿ ಯೋಗದಲ್ಲಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಹಾಗೂ ಸಹಸ್ರಾರ ಎಂಬ ಸಪ್ತ ಚಕ್ರಗಳಿರುವಂತೆ, ಭಕ್ತಿ ಯೋಗದಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ ಎಂಬ ನವವಿಧ ಭಕ್ತಿಯ ಹಂತಗಳಿವೆ, ಎಂದರು.ಈ ಪ್ರಕ್ರಿಯೆಗಳನ್ನು




ಟಿರಾಗ ಯೋಗಟಿದ ಮೂಲಕ ಸಂಯೋಜಿಸಿ ಅನುಸಂಧಾನಗೊಳಿಸಿದಾಗ, ಮಾನವ ದೇಹವು ದೈಹಿಕ, ಮಾನಸಿಕ, ಆಧ್ಯಾತ್ಮಿಕ ಹಾಗೂ ನೈತಿಕವಾಗಿ ಪರಿಪೂರ್ಣ ನೆಮ್ಮದಿಯ ಸ್ಥಿತಿಯನ್ನು ತಲುಪಲು ಸಾಧ್ಯವಾಗುತ್ತದೆ. ಟಿದಾಸ ಪದಟಿ ಎಂದರೆ ಅಹಂಕಾರವನ್ನು ತೊರೆದು ದೇವರಿಗೆ ಸಂಪೂರ್ಣ ಶರಣಾಗುವ ಸ್ಥಿತಿ. ದಾಸ್ಯ ಮನೋಭಾವವು ಕರಗಿ, ಭಕ್ತನು ದೇವರ ಸಾಮೀಪ್ಯಕ್ಕೆ ತಲುಪಿ ಆತ್ಮನಿವೇದನೆಗೆ ಹಾದಿಮಾಡಿಕೊಡುತ್ತದೆ, ಎಂದು ಶಕ್ತಿಚಕ್ರಗಳ ಅನುಸಂಧಾನ ಕ್ರಿಯೆಯ ಗೂಢಾರ್ಥವನ್ನು ಬಿಚ್ಚಿಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕ ಸಿ. ಕೆ. ಹರೀಶ್ ಮಾತನಾಡಿ, ಕರ್ನಾಟಕದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸದಲ್ಲಿ ಭಕ್ತಿ ಪಂಥದ್ದು ಅತ್ಯಂತ ಪ್ರಮುಖ ಕಾಲಘಟ್ಟ. ಭಕ್ತ ಕನಕದಾಸರು ಮತ್ತು ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರು ರಚಿಸಿದ ಕೀರ್ತನೆಗಳು ಇಂದಿಗೂ ಮನೆ ಮಾತಾಗಿವೆ. ಲೌಕಿಕ ಜೀವನದ ಜಂಜಾಟಗಳಿಂದ ಮುಕ್ತಿ ಪಡೆದು ಆಧ್ಯಾತ್ಮಿಕ ಪ್ರಪಂಚಕ್ಕೆ ಪ್ರವೇಶಿಸಲು ಈ ದಾಸ ಸಾಹಿತ್ಯವು ಸುಲಭ ಮಾರ್ಗದರ್ಶಿಯಾಗಿದೆ, ಎಂದು ಬಣ್ಣಿಸಿದರು.

ಕಾರ್ಯಕ್ರಮಕ್ಕೆ ಮೆರುಗು ನೀಡುವಂತೆ ಸುಪ್ರಸಿದ್ಧ ಗಾಯಕ ಗೊರೂರು ಶ್ರೀಕಾಂತ್ ಅವರು ಕನಕದಾಸ ಹಾಗೂ ಪುರಂದರದಾಸರ ಜನಪ್ರಿಯ ಕೀರ್ತನೆಗಳನ್ನು ಹಾಗೂ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಪ್ರೇಕ್ಷಕರನ್ನು ಭಕ್ತಿರಸದಲ್ಲಿ ತೇಲಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಯೋಗಶಾಲೆಯ ಪರವಾಗಿ ಗಾಯಕ ಗೊರೂರು ಶ್ರೀಕಾಂತ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಯೋಗ ಶಾಲೆಯ ಹಿರಿಯ ಗುರುಗಳಾದ ಧರ್ಮಪ್ಪ, ಪುಟ್ಟಪ್ಪ, ಹಿರಿಯ ಶಿಕ್ಷಣಾರ್ಥಿಗಳಾದ ಅಣ್ಣಪ್ಪ ಶೆಟ್ಟಿ, ಸುರೇಶ, ನಾಗೇಶ್ ಉದ್ಯಮಿಗಳಾದ ರಾಜೇಶ್, ಪರಮೇಶ್ ಹಾಗೂ ಪ್ರಮುಖರಾದ ಶ್ರೀಮತಿ ಸುಮನಾ, ರಮ್ಯ, ರುಕ್ಮಿಣಿ, ಜ್ಯೋತಿ, ಚಂದ್ರಕಲ, ಮಣಿ, ಕಲಾವತಿ, ಸ್ವಪ್ನ, ಪಂಕಜ, ತುಳಸಿ, ಪದ್ಮ, ಸುಷ್ಮಾ ಮತ್ತು ಯೋಗ ಶಾಲೆಯ ಇತರ ಶಿಕ್ಷಣಾರ್ಥಿಗಳು ಹಾಗೂ ಆಧ್ಯಾತ್ಮಾಸಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಹಿರೀಸಾವೆಯಲ್ಲಿ ಶ್ರೀ ಮಾರಿಯಮ್ಮ ದೇವಿ ಹಬ್ಬ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಶ್ರೀ ಮಾರಿಯಮ್ಮ ದೇವಿಯ ಹಬ್ಬವನ್ನು ಭಾನುವಾರ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಹಬ್ಬದ ಹಿನ್ನಲೆಯಲ್ಲಿ ಗ್ರಾಮದ ಹೊರ ವಲಯದಲ್ಲಿ ಬೇವಿನ ಮರದ ಕೆಳಗೆ ಹಸಿರು ಚಪ್ಪರ ಹಾಕಿ ತಳಿರು-ತೋರಣ ಕಟ್ಟಿ ವಿವಿಧ ಬಗೆಯ ಪುಷ್ಪಗಳಿಂದ ಸಿಂಗರಿಸಿ ರಂಗೋಲಿ ಬಿಡಿಸಿ ಅಲಂಕರಿಸಲಾಗಿತ್ತು. ಬೆಳಿಗ್ಗೆ 10.30ಕ್ಕೆ ಮಂಗಳವಾದ್ಯದೊಂದಿಗೆ ಆರತಿ ಉತ್ಸವ ಪ್ರಾರಂಭಗೊಂಡು ಶ್ರೀ ಚೌಡೇಶ್ವರಿ ದೇವಿಯ ಮುಖ್ಯ ದ್ವಾರದ ಮೂಲಕ ಹೊರವಲಯದಲ್ಲಿ ನಿರ್ಮಿಸಿರುವ ಹಸಿರು ಚಪ್ಪರದ ಬಳಿಗೆ ಮೆರವಣಿಗೆ ಸಾಗಿತು.

ಹೆಣ್ಣು ಮಕ್ಕಳು ತಂಬಿಟ್ಟಿನ ಆರತಿ ಹೊತ್ತು ಸಾಗಿದರೆ, ತಾಯಂದಿರು ಮಾರಿಯಮ್ಮ ದೇವಿಯ ಮೇಲಿನ ಸೋಬಾನ ಪದ ಹಾಡಿದ್ದು ಮೆರವಣಿಗೆಗೆ ಮೆರಗು ನೀಡಿತು.

ಬಳಿಕ ಪ್ರತಿಷ್ಠಾಪಿಸಿದ್ದ ಶ್ರೀ ಮಾರಿಯಮ್ಮ ದೇವಿಗೆ ವಿವಿಧ ಪುಷ್ಪಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಹೆಣ್ಣು ಮಕ್ಕಳು ದೇವಿಗೆ ತಂಬಿಟ್ಟಿನ ಆರತಿ ಬೆಳಗಿಸುವ ಮೂಲಕ ಭಕ್ತಿ ಭಾವದಲ್ಲಿ ತೇಲಿದರು. ಮಹಾ ಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ನಡೆಯಿತು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-11



ಕ್ರಿ.ಪೂ 612 ರಲ್ಲಿ ಬ್ಯಾಬಿಲೋನಿಯನ್ನರು ಮತ್ತು ಮೇದ್ಯರ ಪಡೆಗಳಿಗೆ ನಿನೆವೆಯ ಪತನವು ವಿಶ್ವದ ಶ್ರೇಷ್ಠ ನಗರಗಳಲ್ಲಿ ಒಂದನ್ನು ಲೂಟಿ ಮಾಡಲು, ನವ-ಅಸಿರಿಯನ್ ಸಾಮ್ರಾಜ್ಯದ ನಾಶಕ್ಕೆ ಮತ್ತು ರಾಜ ಸಿನ್ಶಾರಿಷ್ಕುನ್ ಸಾವಿಗೆ ಕಾರಣವಾಯಿತು ದಿನಾಂಕ ಅಂದಾಜು

610 ಲೈಲತ್ ಅಲ್-ಖದ್ರ್ / ಶಕ್ತಿಯ ರಾತ್ರಿಯ ಸಾಂಪ್ರದಾಯಿಕ ದಿನಾಂಕ, ಮುಸ್ಲಿಮರು ಕುರಾನ್ ಅನ್ನು ಮೊದಲು ಸ್ವರ್ಗದಿಂದ ಜಗತ್ತಿಗೆ ಕಳುಹಿಸಲಾಗಿದೆ ಮತ್ತು ಇಸ್ಲಾಮಿಕ್ ಪ್ರವಾದಿ ಮುಹಮ್ಮದ್ ಅವರಿಗೆ ಬಹಿರಂಗಪಡಿಸಲಾಗಿದೆ ಎಂದು ನಂಬುತ್ತಾರೆ.

1497 ಅನ್ವೇಷಕ ಜಾನ್ ಕ್ಯಾಬಟ್ ರಾಜ ಹೆನ್ರಿ ಗಿ ಗೆ ತನ್ನ ಏಷ್ಯಾ ಪ್ರವಾಸದ ಬಗ್ಗೆ ಹೇಳುತ್ತಾನೆ.

1675 ರಲ್ಲಿ ಲಂಡನ್‌ನ ಗ್ರೀನ್‌ವಿಚ್‌ನಲ್ಲಿ ರಾಯಲ್ ಅಬ್ಸರ್ವೇಟರಿಯ ಅಡಿಪಾಯವನ್ನು ರಾಜ ಚಾರ್ಲ್ಸ್ ೯ ಮತ್ತು ಜಾನ್ ಫ್ಲಾಮ್‌ಸ್ಟೀಡ್ ಹಾಕಿದರು.

1846 ರಲ್ಲಿ, ಕಾಂಗ್ರೆಸ್ ಸ್ಮಿತ್ಸೋನಿಯನ್ ಸಂಸ್ಥೆಯನ್ನು ಸ್ಥಾಪಿಸುವ ಕಾನೂನನ್ನು ಅಂಗೀಕರಿಸಿತು, ಇದು ಈಗ ವಿಶ್ವದ ಅತಿದೊಡ್ಡ ವಸ್ತುಸಂಗ್ರಹಾಲಯ, ಶಿಕ್ಷಣ ಮತ್ತು ಸಂಶೋಧನಾ ಸಂಕೀರ್ಣವಾಗಿದೆ.

1984 ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಲ್ಲಿ 3000 ಮೀ ಓಟದ ಸಮಯದಲ್ಲಿ ಪ್ರಸಿದ್ಧ ಮೇರಿ ಡೆಕ್ಕರ್-ಜೋಲಾ ಬಡ್ ಡಿಕ್ಕಿ; ಡೆಕ್ಕರ್ ಬೀಳುತ್ತಾನೆ, ಬಡ್ 7 ನೇ ಸ್ಥಾನ ಪಡೆಯುತ್ತಾನೆ ಮತ್ತು ರೊಮೇನಿಯಾದ ಮರಿಸಿಕಾ ಪ್ಯೂಕಾ ಗೆಲ್ಲುತ್ತಾನೆ.

# ಅದೊಂದು ಬೇರೆಯದೇ ಅನುಭೂತಿ...2

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-44

ಕಾಡಿನಲ್ಲಿ ಪೊದೆಗಳ ನಡುವೆ ಅರ್ದ ಇಜಾರಿನಂಥ ಚೆಡ್ಡಿ ಧರಿಸಿ ನಡೆಯುವುದು ಅಷ್ಟು ಸುರಕ್ಷಿತವಲ್ಲ. ಕಾಲು ಪೂರ್ತಿ ಮುಚ್ಚುವಂಥ ಪೂರ್ಣ ಪ್ರಮಾಣದ ಪ್ಯಾಂಟ್ ದರಿಸುವುದು ಒಳ್ಳೆಯದು. ಮುಳ್ಳು ತರಚುವುದು, ಎಡವಿ ಬಿದ್ದಾಗ ಆಗಬಹುದಾದ ಗಾಯಗಳು, ಹಾವು ಕಡಿತ ಮುಂತಾದ ಸಂದರ್ಭಗಳಲ್ಲಿ ಅಪಾಯದ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಹಗುರವಾದ ಹತ್ತಿಯ ಟೀ ಷರ್ಟ್, ಜೀನ್ಸ್ ಪ್ಯಾಂಟ್ ಸರಳವಾಗಿ, ಸುಲಲಿತವಾಗಿ ಈ ಉದ್ದೇಶಕ್ಕೆ ಹೊಂದಿಕೆಯಾಗುತ್ತದೆಟಿಟಿ.

ಟೂರಿನ ಕನವರಿಕೆಯಲ್ಲೇ ನಿದ್ದೆಯಿಲ್ಲದೇ ರಾತ್ರಿಯನ್ನು ಕಳೆದ ಮಕ್ಕಳು, ಬೆಳಗಿನ ಮೂರು ಗಂಟೆಗೇ ಎದ್ದು ಸ್ನಾನ ಮಾಡಿ ಶಾಲೆ ಬಳಿ ಸಡಗರದಿಂದ ಜಮೆಯಾದರು. ಮಕ್ಕಳನ್ನು ಕಳಿಸಿಕೊಡಲು ಶಾಲೆಯವರೆಗೂ ಬಂದಿದ್ದ ಪೋಷಕರೂ ಸಹಾ ದೊಡ್ಡಸಂಖ್ಯೆಯಲ್ಲಿದ್ದರು. ಪುರುಷ ಶಿಕ್ಷಕರು ಮತ್ತು ಅಡುಗೆಯವರು ಅಡುಗೆಯ ಸರಂಜಾಮುಗಳನ್ನು ಬಸ್ಸಿನ ಲಗೇಜ್ ಬಾಕ್ಸಿನೊಳಗೆ ಹಾಕುವ ಕಾರ್ಯದಲ್ಲಿ ಮಗ್ನರಾಗಿದ್ದರೆ, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕಿಯರು ಮಕ್ಕಳಿಗೆ ಮತ್ತವರ ಲಗೇಜುಗಳಿಗಾಗಿ ಬಸ್ಸಿನೊಳಗೆ ಸೂಕ್ತ ಸ್ಥಳಗಳನ್ನು ಹೊಂದಿಸುತಿದ್ದರು.

ಆ ದಿನ ಬೆಳಗಿನ ತಿಳಿಬಿಸಿಲಲ್ಲಿ ಬೆಟ್ಟವೇರುವ ಕಾರ್ಯಕ್ರಮವಿರುವುದರಿಂದ ಬಸ್ ಹೊರಟೊಡನೆ ಮಕ್ಕಳೆಲ್ಲ ನಿದ್ರೆ ಮಾಡಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಕವಿತಾ ಮೇಡಂ ಸೂಚನೆ ನೀಡಿದರು. ಆದರೆ ಕಾಡಿನ ಲೋಕದೊಳಗೆ ಹೋಗುವ ಅವರ್ಣನೀಯ ಗುಂಗಿನಲ್ಲಿದ್ದ ಮಕ್ಕಳು ನಿದ್ರಿಸುವುದಿರಲಿ, ತಮ್ಮತಮ್ಮ ನಡುವಿನ ಕಚಪಚ ಮಾತನ್ನು ನಿಲ್ಲಿಸದೇ ನಿಮಿಷಕ್ಕೊಮ್ಮೆ ಹುಡುಗರು ಕೆಕ್ಕೆಕ್ಕೇ ಕಿಸಕ್ ಎಂದರೆ ಹುಡುಗಿಯರು ಗುಡುಗುಡುಗುಡು ಖ್ಖಿಲ್ ಎಂದು ಪಟಾಕಿ ಹಾರಿಸುತಿದ್ದರು. ಡೂಮಿರೆಗೆಯಿಂದ ಬಸ್ ತರಲು ಹಿಂದಿನ ರಾತ್ರಿಯೇ ಹೋಗಿ, ರಾತ್ರಿಯಿಡೀ



ನಿದ್ದೆಗೆಟ್ಟಿದ್ದ ಪೀಟೀಮೇಷ್ಟ್ರು ರುದ್ರಮುನಿ ತಮ್ಮ ಕಿಟ್ ಬ್ಯಾಗಿನ ಸೈಡ್ ಝಿಪ್ಪನ್ನು ತೆರೆದು ವಿಷಲ್‌ಗೆ ಗಂಟುಹಾಕಿದ್ದ ವೈರಿನ ಚಾಟಿಯನ್ನು ಹೊರತೆಗೆದು ಎಲ್ಲರಿಗೂ ಕಾಣುವಂತೆ ಝಳಪಿಸಿದ ನಂತರವೇ ಗಿಲಿಗಡಿಯುತಿದ್ದ ಮಕ್ಕಳು ತಮ್ಮ ಹಿಂದುಮುಂದೆಲ್ಲವನೂ ಬಂದ್ ಮಾಡಿಕೊಂಡು ಆ ಬೆಳಗಿನ ಚಳಿಗೆ ಮುದುರಿ ಕುಳಿತದ್ದು.

ಎಂಟುಗಂಟೆಯ ಸುಮಾರಿಗೆ ಆ ಅಗಾಧ ಏರನ್ನು ದಮ್ಮುಕಟ್ಟಿ ಏರಿ ನಿಟ್ಟುಸಿರು ಬಿಟ್ಟು ದೇವಾಲಯದ ಎದುರಿನ ಬಯಲಲ್ಲಿ ಬಸ್ ನಿಂತಾಗಲೇ ಜೋಗುಳ ತೂಗುವಂತಿದ್ದ ಪಯಣದಿಂದ ಎಚ್ಚರವಾಗಿ ಮಕ್ಕಳು ಕಣ್ಣುಬಿಟ್ಟು ಕಿಟಕಿಯ ಹೊರಗೆ ಕಣ್ಣುಹಾಯಿಸಿದರು.

ಲಗುಬಗೆಯಿಂದ ಬಸ್ಸಿಳಿದ ಹುಡುಗರುಗಳು ಅಲ್ಲೆಲ್ಲೋ ಪೊದೆಗಳತ್ತ ಮುಖಮಾಡಿ ಕಾಲಗಲಿಸಿ ನಿಂತು ನೆಮ್ಮದಿಯ ನಿಟ್ಟುಸಿರುಬಿಟ್ಟರು. ಮುಜುಗರದಿಂದ ಕವಿತಾ ಮೇಡಂನತ್ತ ನೋಡುತ್ತಿದ್ದ ಹುಡುಗಿಯರು ಹೇಳಲು ಆಗದೇ ಮುಖ ಕಿವುಚಿಕೊಳ್ಳುತಿದ್ದರು. ಇದನ್ನು ನೋಡಿದ ಗಿರೀಶ್ಮೇಷ್ಟ್ರು, ಆಆಬನ್ರಮ್ಮ ಇಲ್ಲಿ, ಇಲ್ಲೇ ಹತ್ಹೆಜ್ಜೆ ನಡೆದ್ರೆ ಈ ದೇವಸ್ಥಾನದ ಭಟ್ಟರ ಮನೆ ಇದೆ. ನನಗೆ ಪರಿಚಯಸ್ತರೇ. ಅವರನ್ನೇ ರಿಕ್ವೆಸ್ಟ್ ಮಾಡಿಕೊಳ್ಳೋಣ, ಬನ್ನೀ ಮೇಡಂಟಿಟಿ ಎಂದು ಕರೆದೋಯ್ದರು. ಹುಡುಗರೆಲ್ಲ ಅಡುಗೆ ಸರಂಜಾಮುಗಳನ್ನು ಇಳಿಸಿಕೊಡಲು ನೆರವಾದರು. ಮೂರು ಕಲ್ಲುಗಳನ್ನು ಹೊತ್ತು ತಂದು ಜೋಡಿಸಿ, ಅಲ್ಲೇ ಸುತ್ತಮುತ್ತಲೂ ಬಿದ್ದಿದ್ದ ಒಣಸೌದೆಯನ್ನು ಗುಡ್ಡೆ ಹಾಕಿಕೊಟ್ಟರು. ನಾಲ್ಕು ಜನ ಹುಡುಗರು ಕೊಡಗಳನ್ನು ತೆಗೆದುಕೊಂಡು ಅಲ್ಲೇ ಇದ್ದ ಕೊಳಕ್ಕೆ ಹೋಗಿ ಅಡುಗೆಗೆ ನೀರು ತಂದುಕೊಟ್ಟರು. ಅಡುಗೆಯವರು ಚಕಚಕನೆ ಬೆಳಗಿನ ಉಪಾಹಾರಕ್ಕೆ ಅವಲಕ್ಕಿ ಉಪ್ಪಿಟ್ಟು, ಕೇಸರಿಬಾತು ಹಾಗು ಬಿಸ್ಸಿ ಬಿಸ್ಸಿ ಕಾಫಿ ಮಾಡಿಕೊಟ್ಟು, ತಾವೂ ತಿಂದು ಮಧ್ಯಾಹ್ನದ ಊಟದ ತಯಾರಿಗೆ ಕುಳಿತೇಬಿಟ್ಟರು.

ಮಕ್ಕಳೆಲ್ಲರನ್ನು ಬಸ್ಸಿನ ಪಕ್ಕದ ಬಯಲಿನಲಿ ನಿಲ್ಲಿಸಿಕೊಂಡ ಪೀಟಿಮೇಷ್ಟ್ರು ರುದ್ರಮುನಿ ಯಾರೊ ಒಂದಿಬ್ಬರು ಹುಡುಗರು ಶೋಕಿ ತೋರಿಸಲು ಕಿವಿಗೆ ಸಿಕ್ಕಿಸಿಕೊಂಡಿದ್ದ ಕೆಸೆಟ್ ಹಾಕುವ ವಾಕ್ಮನ್ ಅನ್ನು ನೋಡಿದವರೇ,

ಅದೇನದು ಇಯರ್ ಫೋನೋ? ಹೆಡ್ ಫೋನೋ? ಅದನ್ನು ಬಸ್ಸಿನಲ್ಲಿಯೇ ಬಿಸಾಕಿ ಹೋಗಿ.

ಚಾರಣ ಒಂದು ಸಾಹಸ ಕ್ರೀಡೆ. ದೈನಂದಿನ ಏಕತಾನತೆಯ ಬದುಕಿನಿಂದ ಸ್ವಲ್ಪ ಸಮಯ ಹೊರಬಂದು ಕಾಡಿನ ನೆಲ-ಜಲಗಳ ನಡುವೆ, ಹೊಸ ವಿಷಯಗಳನ್ನು ಅರಿಯುತ್ತಾ, ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ರೋಮಾಂಚನಗೊಳ್ಳಲು ಇದಕ್ಕಿಂತ ಅರ್ಥಪೂರ್ಣ ಹಾಗೂ ಸರಳ ವಿಧಾನ ಬೇರೆಯಿಲ್ಲ. ದಟ್ಟವಾದ ಕಾಡುಗಳು, ಪರ್ವತ ತಪ್ಪಲುಗಳು, ಕಡಿದಾದ ಏರುಗಳು, ನದಿ-ತೊರೆಗಳ ಇಕ್ಕೆಲದ ಜಾಡುಗಳು, ಅನಂತವಾಗಿ ಹರವಿಕೊಂಡಿರುವ ಹುಲ್ಲುಗಾವಲುಗಳು, ಜಲಪಾತದ ಕಂದರಗಳು, ಪ್ರಪಾತದ ಅಂಚುಗಳು, ಸಾಹಸಿಗಳನ್ನು ಕೆಣಕುವ ಅಪಾಯಕಾರಿ ಹರಿವಿನ ನದಿ ಪಾತ್ರಗಳು, ಅಜ್ಞಾತವಾದ ಸುರಂಗಗಳು, ವಿಸ್ಮಯಕಾರಿ ನಿಸರ್ಗ ನಿರ್ಮಿತ ನಿಗೂಢಗಳು, ಸೂರ್ಯನ ಬೆಳಕೇ ಬೀಳದಂಥ ಆಳಕಣಿವೆಗಳು, ಹೀಗೆ ಹೇಳುತ್ತಾ ಹೋದರೆ ಮುಗಿಯದೇ ಇರುವ ಈ ಪೃಥ್ವಿಯ ಕೌತುಕಗಳು ಎಂದಿನಿಂದಲೂ ಸಾಹಸಿಗಳನ್ನು, ನಿಸರ್ಗ ಪ್ರಿಯರನ್ನು ಅನ್ವೇಷಣೆ ಮಾಡಲು ಪ್ರೇರೇಪಿಸುತ್ತಲೇ ಇರುತ್ತವೆ.

ಚಾರಣದಲ್ಲಿ ಸಂದರ್ಶಿಸುವ ಸ್ಥಳದ ವಿವರ, ಮಾರ್ಗದರ್ಶಕರ ಜ್ಞಾನ, ಅವರು ಹೊಂದಿರುವ ಮಾಹಿತಿ, ಚಾರಣ ಪ್ರಾರಂಭವಾದಲ್ಲಿಂದ ಗಮ್ಯ ಸ್ಥಾನದವರೆಗೂ ಇರುವ ದೂರ, ನಡೆಯಲಿರುವ ಹಾದಿಯ ಸ್ವರೂಪ, ಹೊರಡುವ ಸಮಯ, ಹಾದಿ ಕ್ರಮಿಸಲು ತಗಲುವ ಸಮಯ, ಭಾಗವಹಿಸುವವರ ವಯಸ್ಸು , ಅವರ ದೈಹಿಕ ಸಾಮರ್ಥ್ಯ, ಆರೋಗ್ಯ ಸ್ಥಿತಿ, ಆ ದಿನದ ವಾತಾವರಣ ಹಾಗೂ ಹವಾಮಾನ, ಉಪಾಹಾರ ಮತ್ತು ಊಟ, ದಾರಿಯ ಮಧ್ಯೆ ಆಯಾಸವಾದಾಗ ಬೇಕಾಗುವ ಲಘುವಾದ ಪೂರಕ ಆಹಾರ, ಹಣ್ಣು, ಚಾಕಲೇಟುಗಳು, ಶುದ್ಧವಾದ ನೀರು ಇನ್ನಿತರೆ ವಿಚಾರಗಳು ಬಹಳ ಮುಖ್ಯವಾಗಿರುತ್ತವೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248